


# KA## CH7777

KA## CH 7777
ಕುಂದಾ ಅನಂತಸ್ವಾಮಿಯವರು
ಸಾರಿಗೆ ಅಧಿಕಾರಿಗಳೊಡನೆ
ಸೆಣಸಿ, ಸೆಣಸಿ ಪಡೆದಿದ್ದಾದರೂ ಏನು?
KA## CH 7777:
ಅಮೆರಿಕೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್
ಆಗಿ ಅಲ್ಲಿಯೇ ನೆಲೆಸಿದ್ದ
ದೊಡ್ಡ ಮಗ ಗಣೇಶ ಕೊಡಿಸಿದ್ದ
ಕಪ್ಪು ಸೆಡಾನಿಗಾಗಿ.

KA: ಹೇಳುವದೇನಿದೆ?
ಅದು ಅವರ ಹೆಸರು.

##: ಕುಂದಾ ರಾಮಸ್ವಾಮಿಯವರ
ಈಗಿನ ವಯಸ್ಸು.

CH: ಚಾಮರಾಜಪೇಟೆ,
ಅವರ ವಾಸಸ್ಥಾನ.

7: ಇಂಗ್ಲಿಷ್ ವರ್ಣಮಾಲೆಯಲ್ಲಿ
ಏಳನೇ ಅಕ್ಷರ G.

ದ್ವಿತೀಯ ಪುತ್ರಿ ಗಾಯತ್ರಿ ಮದುವೆಯಾಗಿ
ಅಮೆರಿಕೆಯಲ್ಲಿ ನೆಲಸಿದ್ದಾಳೆ.

ತೃತೀಯ ಪುತ್ರ ಗಜಾನನ
ಜರ್ಮನಿಯಲ್ಲಿ ಪ್ರೊಫೆಸರ್,

ನಾಲ್ಕನೇ ಮಗಳು ಗಾರ್ಗಿ,
ಐರ್ಲಂಡ್‌ನಲ್ಲಿ ಉನ್ನತ ವ್ಯಾಸಂಗ.

ಅಂದರೆ, ಕುಂದಾ ಅನಂತಸ್ವಾಮಿಯವರ
ನಾಲ್ಕೂ ಮಕ್ಕಳು ವಿದೇಶಗಳಲ್ಲಿ.
ಎಂಥ ಭಾಗ್ಯಶಾಲಿಗಳು!

ಈಗ ಕುಂದಾ ಅನಂತಸ್ವಾಮಿ ಏನು
ಮಾಡುತ್ತಿದ್ದಾರೆ?
ಏನೂ ಇಲ್ಲ.
ಕಾರು ಓಡಿಸುತ್ತಿದ್ದಾರೆ.